**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ</u>**

CC No. 881/2023

CW- 2/ PW- 2

ಹೆಸರು : ಬೀರಪ್ಪ ಗಂಗಪ್ಪ ಕಬ್ಬೂರು

ವಯಸ್ಸು : 50 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಕಡಹಟ್ಟಿ, ತಾಃ ಹುಕ್ಕೇರಿ.

(ದಿನಾಂಕ 09.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ</u>**

1. ದಿಃ 23.10.2022 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ-3 ಶಿವಾನಂದ ಜರ್ಲಿ ಇವರನ್ನು ಹುಕ್ಕೇರಿ ಸರ್ಕಾರಿ ಆಸ್ಪತ್ರೆಗೆ ಕರೆಸಿದರು. ಅಲ್ಲಿ ಮೃತ ಬಸು ಬೀರಪ್ಪ ಕಮತೆ ಈತನ ಶವವನ್ನು ತೋರಿಸಿ, ಅಲ್ಲಿ ಶವದ ಪಂಚನಾಮೆ ಮಾಡಿದರು. ಆತನ ತಲೆ, ಮುಖ ಮತ್ತು ಗದ್ದಕ್ಕೆ ಪೆಟ್ಟಾಗಿತ್ತು. ಅಲ್ಲಿ ಪೊಲೀಸರು ನಮ್ಮ ಮತ್ತು ಮೃತನ ಹೆಂಡತಿ ಲಕ್ಷ್ಮಿಬಾಯಿ ಇವರ ಸಮಕ್ಷಮ ಶವದ ಪಂಚನಾಮೆ ಮಾಡಿದರು. ಸದರಿ ದಾಖಲೆಯನ್ನು ಈಗ ನೋಡುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಶವ ಪಂಚನಾಮೆ ಆಗಿದ್ದು, ಅದನ್ನು ನಿ.ಪಿ-23 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ಅಲ್ಲಿ ಪೋಟೊ ತೆಗೆದರು. ಫೊಟೋವನ್ನು ನಿ.ಪಿ-24 ಎಂದು ಗುರುತಿಸಲಾಯಿತು. ಫೊಟೋದಲ್ಲಿ ತನ್ನ ಇರುವಿಕೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಮರುದಿನ ಪೊಲೀಸರು ನಮ್ಮನ್ನು ಅಪಘಾತ ಸ್ಥಳಕ್ಕೆ ಕರೆಸಿ ಅಲ್ಲಿ ನನ್ನ ಮತ್ತು ಶಿವರಾಯಿ ಹೊನ್ನೂರು ಇವರ ಸಮಕ್ಷಮ ಸ್ಥಳದಲ್ಲಿ ಪಂಚನಾಮೆ ಮಾಡಿ ಕಚ್ಚಾ ನಕಾಶೆಯನ್ನು ತಯಾರಿಸಿ ಪೋಟೊ ತೆಗೆದರು. ಸ್ಥಳ ಪಂಚನಾಮೆಯನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಬಿ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ಫೊಟೋಗಳನ್ನು ಈಗಾಗಲೇ ನಿ.ಪಿ-4 ಮತ್ತು ನಿ.ಪಿ-5

ಎಂದು ಗುರುತಿಸಲಾಗಿದೆ. ಫೋಟೋದಲ್ಲಿ ತನ್ನ ಇರುವಿಕೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

2. ನಂತರ ನಮ್ಮನ್ನು ಹುಕ್ಕೇರಿ ಪೊಲಿಸ್ ಠಾಣೆಗೆ ಕರೆದುಕೊಂಡು ಬಂದು ಅಲ್ಲಿ ನಿಲ್ಲಿಸಿದ್ದ ಅಪಘಾತಕ್ಕೊಳಗಾದ ಮೋಟರ್ ಬೈಕ್ ಮತ್ತು ಟ್ರಾಕ್ಟರ್ ಮತ್ತು ಟ್ರೇಲರ್ ಗಳನ್ನು ಪೊಲೀಸರು ಪಂಚರಾದ ಶಿವರಾಯಿ ಹೊನ್ನೂರು ಮತ್ತು ನನ್ನ ಸಮಕ್ಷಮ ಸ್ಥಳದಲ್ಲಿ ವಾಹನ ತಡೆಹಿಡಿದ ಪಂಚನಾಮೆ ಮಾಡಿ ಫೋಟೊ ತೆಗೆದರು. ವಾಹನ ತಡೆಹಿಡಿದ ಪಂಚನಾಮೆಯನ್ನು ಈಗಾಗಲೇ ನಿ.ಪಿ-6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-6(ಬಿ) ಎಂದು ಗುರುತಿಸಲಾಯಿತು. ವಾಹನಗಳ ಫೋಟೋಗಳನ್ನು ಈಗಾಗಲೇ ನಿ.ಪಿ-7 ರಿಂದ ನಿ.ಪಿ-22 ಎಂದು ಗುರುತಿಸಲಾಗಿದೆ. ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು ಸಮಯ ನೀಡಲಾಯಿತು.**
**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

**Sd/-**
(ಆದಿತ್ಯ ಆರ್. ಕಲಾಲ್)
**ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ.**